# ವಿಕಾಸದ ನೆಲೆ

## ಚಾರ್ಲ್ಸ್ ಎಂ. ಸೂಪರ್ ಮತ್ತು ಸಾರಾ ಹಾರ್ಕನೆಸ್

ಬಹುತೇಕ ಮನೋವಿಜ್ಞಾನದ ಅಧ್ಯಯನಗಳು ಯೂರೋಪಿಯನ್ ಪೂರ್ವಜರಾದ ಪೂರ್ವ ಅಮೇರಿಕನ್ನರ ಅಥವಾ ಯೂರೂಪಿಯನ್ ಮಧ್ಯಮ ವರ್ಗದವರ ಕುರಿತದ್ದೇ ಆಗಿವೆ. ಈ ಕೃತಿಯು ಪ್ರಪಂಚದಾದ್ಯಂತ ಮತ್ತು ನಮ್ಮಗಳ ನಡುವಿನ ಮಾನವನ ವರ್ತನೆಯ ಬಗೆಗಿನ ಅರ್ಥೈಸುವಿಕೆಯು ಸಂಸ್ಕೃತಿಯ ಸುತ್ತ ಸುತ್ತುವರೆದ ವಿಧಾನದ ಸೀಮಿತತೆಯ ಕುರಿತದ್ದಾಗಿದೆ. ಮಾನವ ಜೀವನದ ಸನ್ನಿವೇಶ, ವರ್ತನೆ ಮತ್ತು ಪ್ರಪಂಚದ ಬಗ್ಗೆ ಆಲೋಚಿಸುವ ವಿಧಾನಗಳಲ್ಲಿ ಇರುವ ವ್ಯತ್ಯಾಸದಲ್ಲಿನ ಶ್ರೀಮಂತಿಕೆಯು ಜನರನ್ನು ಅವರಿರುವ ಸನ್ನಿವೇಶದಲ್ಲಿ ಅರ್ಥೈಸಿಕೊಳ್ಳುವುದಕ್ಕಾಗಿ ಹೆಚ್ಚು ಸಮಗ್ರ/ ವಿಸ್ತೃತ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು ನಮಗೆ ಸವಾಲೆನಿಸುತ್ತದೆ. ಇದು ಆರ್ಕ್ಟಿಕ್ ಪ್ರದೇಶಗಳ ಹಿಮಾವೃತ ಬಂಜರು ಪ್ರದೇಶಗಳಾಗಿರಬಹುದು, ಏಷ್ಯಾದ ಜನನಿಬಿಡ ನಗರ ಪ್ರದೇಶಗಳಾಗಿರಬಹುದು ಅಥವಾ ಮಧ್ಯ ಅಮೇರಿಕಾದ ಅರೆನಗರಗಳಾಗಿರಬಹುದು.

ಮಿಶ್ರ ಸಂಸ್ಕೃತಿ ಸಂದರ್ಭ/ ದೃಶ್ಯಾವಳಿಯಿಂದ (cross-cultural panorama) ಹಿಂದೆ ಸರಿದು ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ – ವ್ಯಕ್ತಿಯ ವರ್ತನೆಯನ್ನು ಸಂಯೋಜಿಸುವಲ್ಲಿ ಸಂಸ್ಕೃತಿಯು ತುಂಬಾ ಪ್ರಬಲವಾದುದಾದರೆ, ಅದರ ಹಿಂದಿನ ಕಾರಣವೇನಿರಬಹುದು? ಮಾನವ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿರುವ ತೌಲನಿಕ ಸಾಮಾಜಿಕ ವಿಜ್ಞಾನಿಗೆ ಇರುವ ಮುಖ್ಯ ಪ್ರಶ್ನೆಯ ಕಾಳಜಿ, ಪ್ರಸ್ತುತ ವರ್ತನೆಯಲ್ಲಿನ ವ್ಯತ್ಯಾಸದ ಬಗ್ಗೆ ಅಲ್ಲ, ಬದಲಾಗಿ ಜೀವನದಾದ್ಯಂತ ಬೆಳವಣಿಗೆಯ ಜೊತೆಯಲ್ಲಿ ಯಾವುದೇ ನಿರ್ದಿಷ್ಟ ಕಾಲದಲ್ಲಿ ವೀಕ್ಷಿಸಬಹುದಾದ ಬದಲಾವಣೆಗಳನ್ನು ಉಂಟುಮಾಡುವುದಕ್ಕೆ ಪರಸ್ಪರ ಸ್ಪಂದಿಸುವ ಸಾಮಾಜಿಕ ಬಲಗಳಲ್ಲಿನ ವ್ಯತ್ಯಾಸಗಳ ಬಗ್ಗೆ ಅರಿಯುವುದಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಪ್ರೌಢಾವಸ್ಥೆಯಲ್ಲಿ ಮಾರ್ಪಡಿಸಬಹುದಾದ ಆದರೂ ಜೀವಿತಾವಧಿಯ ಉದ್ದಕ್ಕೂ ಅಸ್ತಿತ್ವವನ್ನು ಕಾಯ್ದುಕೊಳ್ಳುವ ಯಾವುದೋ ಒಂದು ಅಂಶದ ಮೇಲೆ ಬಾಲ್ಯದ ಸಂಸ್ಕೃತಿಯು ಹೇಗೆ ವಿಶಿಷ್ಟ ಅಡಿಪಾಯವನ್ನು ಒದಗಿಸಿರುತ್ತದೆ? ಒಂದು ನಿರ್ದಿಷ್ಟ ಸಂಸ್ಕೃತಿಯ ಸನ್ನಿವೇಶದಲ್ಲಿ ಬೆಳವಣಿಗೆಯನ್ನು ಹೊಂದುವುದು, ಅದು ಬೋಸ್ಟನ್, ರಿಯೋ ಡಿ ಜನ್ಯೆರೋ, ಅಥವಾ ಟಾಂಜಾನಿಯಾ ಆಗಿರಬಹುದು, ಆಲೋಚಿಸುವ ವಿಧಾನಗಳು ಸ್ಥಾಪಿತಗೊಳ್ಳಲು ಮತ್ತು ತನ್ನ ಗುರುತಿಸುವಿಕೆಯ ಪರಿಸರದ ಅವಿಭಾಜ್ಯ ಅಂಗವಾಗಿ ವರ್ತಿಸಲು ಮತ್ತು ಭವಿಷ್ಯದ ದಿನಗಳಲ್ಲಿ ಸಂಭವಿಸಬಹುದಾದಂತಹ ಪರಿಸರದ ತೀವ್ರತರ ಬದಲಾವಣೆಯ

ಸನ್ನಿವೇಶದಲ್ಲಿಯೂ ಬದುಕುಳಿಯಲು ಹೇಗೆ ಕಾರಣವಾಗುತ್ತದೆ ? ಮನಸ್ಸು ಮತ್ತು ವರ್ತನಾ ಅಭಿವ್ಯಕ್ತಿ ಮನಃಶಾಸ್ತ್ರವನ್ನು (*behavioral manifestations psychology*) ಅರ್ಥೈಸಿಕೊಳ್ಳುವುದಕ್ಕೆ ಮೊದಲು ಅಂತಿಮವಾಗಿ ಅದನ್ನು ರೂಪುಗೊಳಿಸಿದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವುದೂ ಅಗತ್ಯವಾಗುತ್ತದೆ. ವ್ಯಕ್ತಿತ್ವ ಮತ್ತು ವರ್ತನೆಗಳು ಹೇಗೆ ಪರಸ್ಪರ ಪ್ರಭಾವ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ವ್ಯಕ್ತಿಯು ಬೆಳೆದು ಬಂದ ಸಾಂಸ್ಕೃತಿಕ ಪರಿಸರವನ್ನು ಗಮನಿಸಬೇಕಾದ ಅಗತ್ಯವಿರುತ್ತದೆ.

ಕಳೆದ ಶತಮಾನಗಳಲ್ಲಿ ಈ ಪ್ರಕ್ರಿಯೆಯನ್ನು ಹಲವು ವಿಧಗಳಲ್ಲಿ ಅಧ್ಯಯನ ಮಾಡಿರುವುದು ನಮ್ಮ ಸದ್ಯದ ಅರ್ಥೈಸುವಿಕೆಗೆ ಸಾಕಷ್ಟು ಕೊಡುಗೆಯನ್ನು ನೀಡಿದೆ (ಈ ಕೃತಿಯ ಸಾರಾಂಶಕ್ಕಾಗಿ ನೋಡಿ, ಹಾರ್ಕ್ನೆಸ್ & ಸೂಪರ್, 1987). ಮಾನವಶಾಸ್ತ್ರಜ್ಞರು ವಿವಿಧ ಸಮಾಜಗಳಲ್ಲಿ ಜೀವನದ ಬಗ್ಗೆ ವಿವರವಾದ ಅಧ್ಯಯನಗಳನ್ನು ನಡೆಸಿದ್ದಾರೆ. ಇವುಗಳಲ್ಲಿ ಕೆಲವು ಆಧುನಿಕ ಬದಲಾವಣೆಯಿಂದ ಮೂಲಭೂತವಾಗಿ ಮಾರ್ಪಾಟು ಹೊಂದಿವೆ. ಇದು ಪ್ರಪಂಚದಾದ್ಯಂತ ಮಕ್ಕಳ ಜೀವನ ಮತ್ತು ಕುಟುಂಬ ಕಾರ್ಯನಿರ್ವಹಣೆಯ ಬಗೆಗಿನ ಚಿತ್ರಣವನ್ನು ಒದಗಿಸುತ್ತದೆ. 1920ರ ದಶಕದ ಅಂತ್ಯದಲ್ಲಿ ಮಾರ್ಗರೇಟ್ ಮೀಡ್‌ರವರ ಸಮೋವಾದಲ್ಲಿ ನಡೆಸಿದ ಹದಿಹರೆಯದವರ ಮೇಲಿನ ಅಧ್ಯಯನ ಕೃತಿಯು ಅತ್ಯುತ್ತಮವಾಗಿ ಮಾರಾಟವಾದ ನಂತರ ಇವುಗಳಲ್ಲಿನ ಕೆಲವು ವಿಚಾರಗಳು ಮಕ್ಕಳು ಬೆಳವಣಿಗೆ ಹೊಂದುವುದರ ವಿಚಾರದ ಮೇಲೆ ಅಮೇರಿಕನ್ನರ ಆಲೋಚನೆಗಳ ಮೇಲೆ ವ್ಯಾಪಕ ಪ್ರಭಾವವನ್ನು ಬೀರಿವೆ (ಮೀಡ್, 1928). ಮತ್ತೊಂದು ದಿಕ್ಕಿನಲ್ಲಿ ಮಿಶ್ರ-ಸಾಂಸ್ಕೃತಿಕ ಮನೋವಿಜ್ಞಾನಿಗಳು ವಿಭಿನ್ನ ಪರಿಸರಗಳಲ್ಲಿ ವಾಸಿಸುತ್ತಿರುವ ಮಕ್ಕಳನ್ನು–ಎಲ್ಲಿ ಪಾಶ್ಚಿಮಾತ್ಯ- ಶೈಲಿಯ ಶಿಕ್ಷಣ ಇನ್ನೂ ಪರಿಚಿತವಾಗಿಲ್ಲವೊ ಅಂತಹ ಸಮುದಾಯಗಳಲ್ಲಿ ಪರೀಕ್ಷಿಸಿದ್ದಾರೆ ಮತ್ತು ಇತರೆ ಪ್ರಮಾಣೀಕೃತ ಕ್ರಮಗಳಿಂದ ಅರಿಯಲು ಪ್ರಯತ್ನಿಸಿದ್ದಾರೆ. ಆದರೂ, ಫಲಿತಾಂಶಗಳನ್ನು ಮಧ್ಯಮ ವರ್ಗದ ಪಾಶ್ಚಾತ್ಯ ಮಕ್ಕಳೊಂದಿಗೆ ಹೋಲಿಕೆ ಮಾಡಿದಾಗ ಕೆಲವೊಮ್ಮೆ ಪಾಶ್ಚಿಮಾತ್ಯವಲ್ಲದ ಗುಂಪಿನ ಮಕ್ಕಳಲ್ಲಿ "ಕೊರತೆಗಳು' ಅಥವಾ ಕೆಲವು ಅಂಶಗಳಲ್ಲಿ ನಿಧಾನಗತಿ ಹೊಂದಿರುವುದು ಕಂಡುಬಂದರೂ ಕೂಡ ಈ ವ್ಯತ್ಯಾಸಗಳು ವಿಶಿಷ್ಟ ಸಾಂಸ್ಕೃತಿಕ ಪರಿಸರಗಳು ಒದಗಿಸುವ ವಿಭಿನ್ನ ಅಭಿವೃದ್ಧಿ ಮಾರ್ಗಗಳಿಂದಾಗಿ ಎಂದು ವಿವರಿಸಲು ಅವುಗಳನ್ನು ಬಹುತೇಕವಾಗಿ ಬಳಸಬಹುದಾಗಿದೆ. ಎಲ್ಲಾ ಸಮಾಜಗಳಲ್ಲಿಯೂ ಬಹುತೇಕ ಮಕ್ಕಳು ಸಮರ್ಥ ವಯಸ್ಕರಾಗಿಯೇ ಬೆಳವಣಿಗೆ ಹೊಂದುತ್ತಾರೆ, ವ್ಯವಸ್ಥಿತ ಮಿಶ್ರ ಸಾಂಸ್ಕೃತಿಕ ಕುರಿತ ಹೋಲಿಕೆಯ ಪ್ರಮುಖ ಕೊಡುಗೆಯೇನೆಂದರೆ ವಿಭಿನ್ನತೆಯನ್ನು ಸಮರ್ಥವಾಗಿ ಹೇಗೆ ವ್ಯಾಖ್ಯಾನಿಸಬಹುದು ಮತ್ತು ಮಕ್ಕಳು ಅದನ್ನು ಹೇಗೆ ಸಾಧಿಸುತ್ತಾರೆ ಎಂಬುದನ್ನು ತೋರಿಸಲು ಸಾಧ್ಯವಾಗಿಸುತ್ತದೆ.

ಚಾರ್ಲ್ಸ್ ಎಂ ಸೂಪರ್‌ರವರು ಪೆನ್ನಿಸಿಲವೇನಿಯಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಮಾನವ ಅಭಿವೃದ್ಧಿ ಮತ್ತು ಕೌಟುಂಬಿಕ ಅಧ್ಯಯನಗಳ ವಿಷಯದಲ್ಲಿ ಪ್ರಾಧ್ಯಾಪಕರಾಗಿರುವರು. ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಅಭಿವೃದ್ಧಿ ಮನಶಾಸ್ತ್ರದಲ್ಲಿ ಪಿಹೆಚ್‌ಡಿ ಪದವಿಯನ್ನು ಪಡೆದಿದ್ದಾರೆ ಮತ್ತು ಜಡ್ಜ್ ಬೇಕರ್ ಗೈಡನ್ಸ್ ಸೆಂಟರ್‌ನಲ್ಲಿ ಚೈಲ್ಡ್ ಕ್ಲಿನಿಕಲ್ ಸೈಕಾಲಜಿಯ ತರಬೇತಿಯನ್ನೂ ಪಡೆದಿದ್ದಾರೆ. ಅವರ ಸಂಶೋಧನಾ ಆಸಕ್ತಿಯು ಆರಂಭಿಕ ಬೆಳವಣಿಗೆಯನ್ನು ರೂಪುಗೊಳಿಸುವಲ್ಲಿ ಸಂಸ್ಕೃತಿಯ ಪಾತ್ರ ಮತ್ತು ತೀರ್ವ ಅಪೌಷ್ಟಿಕತೆ ಮತ್ತು ವರ್ತನಾ ಅಸ್ವಸ್ಥತೆಯಂತಹ ಸಮಸ್ಯೆಗಳ ಅಪಾಯವನ್ನು ತಡೆಗಟ್ಟುವ ಮಧ್ಯಸ್ಥಿಕೆಯನ್ನು ವಿನ್ಯಾಸಗೊಳಿಸುವುದನ್ನು ಒಳಗೊಂಡಿದೆ. ಪರವಾನಿಗೆಸಹಿತ ವೃತ್ತಿನಿರತ ಮನಶಾಸ್ತ್ರಜ್ಞರಾದ ಡಾ. ಸೂಪರ್‌ರವರು ಸಂಶೋಧನೆಯಿಂದ ಕಂಡುಬಂದ ಅಂಶಗಳನ್ನು ಪೋಷಕರು ಮತ್ತು ಮಕ್ಕಳ ವೈಯಕ್ತಿಕ ಆಪ್ತಸಮಾಲೋಚನೆಯನ್ನು ಮಾಡುವಾಗ ಬಳಕೆ ಮಾಡಿಕೊಳ್ಳುವುದರಲ್ಲಿ ಕಾರ್ಯನಿರತರಾಗಿರುವರು. ಅವರು ಮೂಲ ಮತ್ತು ಅನ್ವಯಿಕ ಸಂಶೋಧನೆಯನ್ನು ಪ್ರಪಂಚದ ಅನೇಕ ದೇಶಗಳಲ್ಲಿ ನಡೆಸಿದ್ದಾರೆ ಮತ್ತು ಯೂನಿಸೆಫ್ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ.

ಸಾರಾ ಹಾರ್ಕ್ನೆಸ್‌ರವರು ಪೆನ್ನಿಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಮಾನವ ಅಭಿವೃದ್ಧಿ ಮತ್ತು ಮಾನವಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಅವರು ಹಾರ್ವರ್ಡ್ ಯೂನಿವರ್ಸಿಟಿಯಿಂದ ಸಾಮಾಜಿಕ ಮಾನವಶಾಸ್ತ್ರದಲ್ಲಿ ಪಿಹೆಚ್‌ಡಿ ಮತ್ತು ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರ ಸಂಶೋಧನೆಯು ಮಾನವ ಅಭಿವೃದ್ಧಿ ಮತ್ತು ಆರೋಗ್ಯದ ಸಾಂಸ್ಕೃತಿಕ ಸಂರಚನೆಯ ಮೇಲೆ ಕೇಂದ್ರಿತವಾಗಿವೆ ಮತ್ತು ಅವರು ಗ್ವಾಟಿಮಾಲಾ, ಕೀನ್ಯಾ ಮತ್ತು ಅಮೇರಿಕಾದಲ್ಲಿ ಮಕ್ಕಳು ಮತ್ತು ಕುಟುಂಬಕ್ಕೆ ಸಂಬಂಧಿಸಿದಂತೆ ಸಂಶೋಧನೆಯನ್ನು ನಡೆಸಿದ್ದಾರೆ. ಗಿಲ್‌ಫೋರ್ಡ್ ಪ್ರಕಾಶನದ ಸಂಸ್ಕೃತಿ ಮತ್ತು ಮಾನವ ಅಭಿವೃದ್ಧಿ ಸರಣಿ ಕೃತಿಗಳಿಗೆ ಸಂಬಂಧಿಸಿದಂತೆ ಚಾರ್ಲ್ ಸೂಪರ್‌ರವರೊಂದಿಗೆ ಸಹ ಸಂಕಲನಕಾರರಾಗಿದ್ದರು ಹಾಗೂ ಗಿಲ್‌ಫೋರ್ಡ್ ಪ್ರಕಾಶನದಿಂದಲೇ ಪ್ರಕಟಗೊಳ್ಳಲಿರುವ 'ಪೋಷಕರು ಮತ್ತು ಸಾಂಸ್ಕೃತಿಕ ನಂಬಿಕೆ ವ್ಯವಸ್ಥೆ' ಎಂಬ ಸಂಪಾದಿತ ಸಂಪುಟದ ಸಹಲೇಖಕರೂ ಆಗಿದ್ದಾರೆ.

## ಮಿಶ್ರ ಸಾಂಸ್ಕೃತಿಕ ಸಂಶೋಧನೆಯಿಂದ ಪಡೆದ ಒಳನೋಟ

ವಿವಿಧ ಸಂಸ್ಕೃತಿಗಳಲ್ಲಿ ಮಕ್ಕಳು ಮತ್ತು ಕುಟುಂಬಗಳ ಮೇಲೆ ನಡೆಸಿದ ಸಂಶೋಧನೆಯಿಂದ ಎರಡು ಮುಖ್ಯ ಒಳನೋಟಗಳನ್ನು ಪಡೆದುಕೊಳ್ಳಲಾಗಿದೆ. ಮೊದಲನೆಯದು ಸಂಸ್ಕೃತಿಯ ವಿವಿಧ ಭಾಗಗಳು ಒಂದು ವ್ಯವಸ್ಥೆಯಾಗಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಆಧರಿಸಿದೆ. ಉದಾಹರಣೆಗೆ : ಮಕ್ಕಳನ್ನು ಬೆಳೆಸುವ ರೀತಿ ಆಯಾ ಸಂಸ್ಕೃತಿಯ ಆರ್ಥಿಕ ಉತ್ಪಾದನಾ ವಿಧಾನದ ಕೆಲವು ಅಂಶಗಳಿಂದ ಪ್ರಭಾವಿತವಾಗುವ ಪ್ರವೃತ್ತಿಯನ್ನು ಹೊಂದಿರುವುದು. ಸಾಂಪ್ರದಾಯಿಕ ಕೃಷಿ ಆಧಾರಿತ ಸಮಾಜಗಳಲ್ಲಿನ ಮಕ್ಕಳಿಗೆ ಸಾಮಾನ್ಯವಾಗಿ ಅನೇಕ ಮನೆ ಕೆಲಸಗಳು ಇರುತ್ತವೆ, ಇವರಿಗೆ ಆರಂಭದಲ್ಲಿಯೇ ಜವಾಬ್ದಾರಿ ಮತ್ತು ವಿದೇಯತೆಯನ್ನು ಕಲಿಸಲಾಗಿರುತ್ತದೆ (ಉದಾಹರಣೆಗಾಗಿ ನೋಡಿ, ವೈಟನಿಂಗ್ ಮತ್ತು ಎಡ್‌ವರ್ಡ್ 1988ನ್ನು). ಸಾಮಾನ್ಯವಾಗಿ ಈ ಮಕ್ಕಳ ಕುಟುಂಬಗಳು ಅನೇಕ ಮಕ್ಕಳನ್ನು ಹೊಂದಿ, ದೊಡ್ಡದಾಗಿರುತ್ತವೆ, ಮತ್ತು ಒಂದೇ ಸೂರಿನಡಿ ಅಥವಾ ನೆರೆಹೊರೆಯಲ್ಲಿ ಅದೇ ಕುಟುಂಬದ ವಿಸ್ತೃತ ಕುಟುಂಬಗಳು ವಾಸಿಸುತ್ತಿರುತ್ತವೆ.ಹಾಗೂ ಹಿರಿಯರಿಂದ ಕಿರಿಯರವರೆಗೆ ಪ್ರಬಲ ಅಧಿಕಾರದ ಆಳ್ವಿಕೆಗೆ ಕುಟುಂಬವು ಒಳಪಟ್ಟಿರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಪಾಶ್ಚಾತ್ಯ ಮಧ್ಯಮ ವರ್ಗದ ಕುಟುಂಬಗಳ ಅದರಲ್ಲೂ ವಿಶೇಷವಾಗಿ ಅಮೇರಿಕಾದ ಮಧ್ಯಮ ವರ್ಗದ ಮಕ್ಕಳು ಸಣ್ಣ, ವಿಭಕ್ತ ಕುಟುಂಬಗಳಲ್ಲಿ ಬೆಳವಣಿಗೆ ಹೊಂದುತಿದ್ದು ಕುಟುಂಬಗಳ ಆ ಮಕ್ಕಳು ತಮ್ಮಲ್ಲಿರುವ ವೈಯಕ್ತಿಕ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶವಿರುವುದು. ಪೋಷಕರು ಆರ್ಥಿಕವಾಗಿ ಮತ್ತು ಮನೆಕೆಲಸಗಳ ಮೂಲಕ ಕುಟುಂಬಕ್ಕೆ ಬೆಂಬಲ ನೀಡುವ ಪ್ರವೃತ್ತಿಯನ್ನು ಕಾಣಬಹುದು.ಈ ಎರಡೂ ಪರಿಸರದಲ್ಲಿಯೂ ತಮ್ಮಿಂದ ಏನನ್ನು ಅಪೇಕ್ಷಿಸಲಾಗುತ್ತದೆ, ತಮ್ಮ ಸುತ್ತ ಮುತ್ತಲ ಜೀವನವು ಹೇಗೆ ವ್ಯವಸ್ಥಿತವಾಗಿದೆ, ಪೋಷಕರು ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳುತ್ತಾರೆ, ಮಕ್ಕಳ ಜೀವನವನ್ನು ಹೇಗೆ ರೂಪಿಸುತ್ತಾರೆ ಮತ್ತು ಪರಸ್ಪರ ಪೋಷಕರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ನೋಡುತ್ತಾ ಮಕ್ಕಳು ಕಲಿಯುತ್ತಾರೆ.

ಮಿಶ್ರ ಸಂಸ್ಕೃತಿಯ ಸಂಶೋಧನೆಯ ಎರಡನೆ ಅನ್ವೇಷಣೆ ಏನೆಂದರೆ, ಪೋಷಕರು ಮತ್ತು ಮಕ್ಕಳು ಎಲ್ಲಾ ಸಮಯದಲ್ಲಿಯೂ, ಎಲ್ಲಾ ಜಾಗಗಳಲ್ಲಿಯೂ ಒಂದೇ ರೀತಿಯ ಸಮಸ್ಯೆಗಳನ್ನು ಒಂದೇ ರೀತಿಯ ಅಗತ್ಯದ ಅನುಭವಗಳನ್ನು ಮತ್ತು ಒಂದೇ ರೀತಿಯ ಕೆಲವು ಪ್ರಶಂಸೆ ಮತ್ತು ಸಂತಸಗಳನ್ನು ಎದುರಿಸುತಾರೆ ಮತ್ತು ಬಯಸುತ್ತಾರೆ. ಪ್ರತಿ ಸಂಸ್ಕೃತಿಯಲ್ಲಿನ ಪ್ರತಿ ಮಗುವಿನ ಮತ್ತು ಮಕ್ಕಳ ಅನುಭವವು ಅನನ್ಯವಾಗಿದ್ದರೂ ಒಟ್ಟಾರೆ ಬಾಲ್ಯದ ಅನುಭವವನ್ನು ಮಾನವ ವಿಕಾಸ ಎಂಬ ಸಾಮಾನ್ಯ ಕಥೆಯ ಸುತ್ತ ಕಟ್ಟಲಾಗಿದೆ. ಎಲ್ಲಾ ಮಕ್ಕಳು ನಡೆಯುವುದನ್ನು, ಬೇರೆ ಮಕ್ಕಳೊಂದಿಗೆ ಸೇರಿ ಆಡುವುದನ್ನು, ತನ್ನಿಂದ ತಾಯಿ ದೂರ ಹೋಗುವುದನ್ನು ಮತ್ತು ಮರಳಿಬರುವುದನ್ನು ಹಾಗೂ ಅನೇಕ ರೀತಿಯ ಜನರ ಆರೈಕೆಯನ್ನು

ಒಪ್ಪಿಕೊಳ್ಳುವುದನ್ನು ಕಲಿಯಲೇಬೇಕು. ಎಲ್ಲಾ ಕಡೆಯೂ ಗಂಡು ಮತ್ತು ಹೆಣ್ಣು ಮಕ್ಕಳು ಇರುವ ರೀತಿಯಲ್ಲಿ ಸಾಕಷ್ಟು ವ್ಯತ್ಯಾಸಗಳು ಇದ್ದರೂ ತಮ್ಮ ಲಿಂಗತ್ವ ಪಾತ್ರಗಳನ್ನು ಸರಿಯಾಗಿ ಕಲಿತುಕೊಳ್ಳಬೇಕು. ತಮ್ಮ ತಮ್ಮ ಸಂಸ್ಕೃತಿಯಲ್ಲಿ ಇರುವ ಪ್ರೌಢತ್ವವನ್ನು ಕುರಿತಾದ ಅಭಿಪ್ರಾಯಗಳನ್ನೂ ಎಲ್ಲಾ ಕಡೆಗಳಲ್ಲಿಯೂ ತಮ್ಮದೇ ಸಮುದಾಯಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬ ಜವಾಬ್ದಾರಿಯನ್ನು ಕಲಿತುಕೊಳ್ಳಬೇಕು.

## ‘ವಿಕಾಸದ ನೆಲೆ” ಎಂಬುದರ ಅರ್ಥವೇನು?

ಸಾಂಸ್ಕೃತಿಕ ಸನ್ನಿವೇಶದಲ್ಲಿ ಮಾನವ ಅಭಿವೃದ್ಧಿಯ ಕುರಿತು ಆಲೋಚಿಸುವುದಕ್ಕಾಗಿ ವಿಕಾಸದ ನೆಲೆ ಎಂಬ ಕಲ್ಪನೆಯ(idea) ಮೇಲಿನ ಎರಡು ಪಾಠಗಳನ್ನು ಒಂದು ಚೌಕಟ್ಟಿನಡಿ ಸೇರಿಸಲಾಗಿದೆ (ಸೂಪರ್ ಮತ್ತು ಹಾರ್ಕ್ನೆಸ್ 1986). ಇದನ್ನು ಮಕ್ಕಳ ಬೆಳವಣಿಗೆಗೆ ಸಂಬAಧಿತ ಮಾಹಿತಿಯನ್ನು ವ್ಯವಸ್ಥಿತಗೊಳಿಸಲು ಮತ್ತು ಮಕ್ಕಳ ಮತ್ತು ಕುಟುಂಬಗಳ ಜೀವನ ಮಟ್ಟದ ಸುಧಾರಣೆಗಾಗಿ ಕೇಂದ್ರೀತ ಪರಿಶೀಲನೆ ನಡೆಸಲು ಬಳಸಬಹುದು. ಔಪಚಾರಿಕ ಅರ್ಥದಲ್ಲಿ ಇದು ಅಭಿವೃದ್ಧಿಯ ಸಿದ್ಧಾಂತ ಅಲ್ಲವಾದರೂ ವಿಕಾಸದ ನೆಲೆ ಎಂಬುದು ಸಂಸ್ಕೃತಿಯು ಅಭಿವೃದ್ಧಿ ಪ್ರಕ್ರಿಯೆಯನ್ನು ಹೇಗೆ ನಡೆಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಒಂದು ಚೌಕಟ್ಟನ್ನು ಒದಗಿಸುತ್ತದೆ. ಈ ಚೌಕಟ್ಟನ್ನು ಬಳಕೆ ಮಾಡುವುದರಿಂದ, ನಿರ್ದಿಷ್ಟ ಮಕ್ಕಳ ಸಾಂಸ್ಕೃತಿಕ ಪರಿಸರವು ಹೇಗೆ ಸಂಯೋಜನೆಗೊಂಡಿದೆ ಎಂಬುದನ್ನು ಗಮನಿಸಲು, ಯಾವುದೇ ನಿರ್ದಿಷ್ಟ ಸಮಯದಲ್ಲಿ ಹೇಗೆ ಸಂಸ್ಕೃತಿಯನ್ನು ಪ್ರಸ್ತುತಪಡಿಸಲಾಗುತ್ತದೆ ಎಂಬುದನ್ನು ವೀಕ್ಷಿಸಲು ಸಾಧ್ಯವಾಗುತ್ತದೆ.

ನೆಲೆ ಎಂಬ ಪದವನ್ನು ಜೈವಿಕ ಪರಿಸರ ವಿಜ್ಞಾನದಿಂದ ಎರವಲು ಪಡೆಯಲಾಗಿದೆ. ಈ ಪದವನ್ನು ನಿರ್ದಿಷ್ಟ ಪ್ರಾಣಿಗಳ ಅಥವಾ ಪ್ರಾಣಿಗಳ ಪ್ರಬೇದವು ವಾಸಿಸುವ ಪರಿಸರದ ವೈಶಿಷ್ಟ್ಯಗಳ ಸಂಯೋಜನೆಯನ್ನು ವಿವರಿಸಲು ಬಳಸುವರು. ಅಂದರೆ ಪಾರಿವಾಳ ಮತ್ತು ರಾಬಿನ್ ಪಕ್ಷಿಗಳು “ಒಂದೇ ಜಾಗದಲ್ಲಿ” ಅಂದರೆ ನಗರದ ಉದ್ಯಾನದ ಅದೇ ಭಾಗದಲ್ಲಿ ವಾಸಿಸುತ್ತಿರಬಹುದು, ಆದರೆ ನಿಖರವಾಗಿ ಎಲ್ಲಿ ತಮ್ಮ ಗೂಡನ್ನು ಕಟ್ಟುತ್ತವೆ ಮತ್ತು ಯಾವ ವಸ್ತುಗಳನ್ನು ಬಳಸಿ ಕಟ್ಟುತ್ತವೆ, ಪರಿಸರದಲ್ಲಿ ಹುಡುಕುವ ಆಹಾರ, ಇತರೆ ಪರಭಕ್ಷಕಗಳಿಗೆ ಬಲಿಯಾಗುವ ದುರ್ಬಲತೆ ಇವೆಲ್ಲವೂ ವಿಶಿಷ್ಟವಾಗಿರುತ್ತವೆ. ಅವುಗಳು ಹೊಂದಿಕೊಳ್ಳುವ ನಿರ್ದಿಷ್ಟ ರೀತಿ ಮತ್ತು ಅದೇ ಸಾಮಾನ್ಯ ಪರಿಸರವನ್ನು ಬಳಸಿಕೊಳ್ಳುವುದು ವಿಭಿನ್ನವಾಗಿರುತ್ತವೆ ಮತ್ತು ಹೀಗೆ ಅವು ತಮ್ಮದೇ ಆದ ವಿಶಿಷ್ಟ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತವೆ. ಆದುದರಿಂದ ಒಂದು ಮಗುವಿನ ವಿಕಾಸದ ನೆಲೆಯು ಅದರ ಲಿಂಗ, ವಯಸ್ಸು ಮತ್ತು ನಿರ್ದಿಷ್ಟ ಮನೋಧರ್ಮದ ಮೇಲೆ ನಿಗದಿಯಾಗುತ್ತದೆ.ಒಂದು ನಿರ್ದಿಷ್ಟ ಮಗುವಿಗೆ ಇದು ಮತ್ತು ಇತರೆ ಗುಣಲಕ್ಷಣಗಳ ಕಾರಣದಿಂದ ಆ ಮಗುವು ತನ್ನ ಕುಟುಂಬದ ಇತರೆ ಸದಸ್ಯರು ತಮ್ಮದಾಗಿಸಿಕೊಂಡಿರುವ ಪ್ರಪಂಚಗಳಿಗಿಂತಲೂ

ಭಿನ್ನವಾದ ಸಾಂಸ್ಕೃತಿಕ 'ಪ್ರಪಂಚ'ವನ್ನು ತನ್ನದಾಗಿಸಿಕೊಂಡಿರುತ್ತದೆ ಮತ್ತು ಮುಂದುವರೆದು ಮಗುವಿನ ಪ್ರಪಂಚವು ತಾನು ಬೆಳೆದಂತೆಲ್ಲಾ ಬದಲಾಗುತ್ತಾ ಹೋಗುತ್ತದೆ.

ಒಂದು ಮಗುವಿನ ಜೀವನವನ್ನು ಮುಖ್ಯವಾಗಿ ಮೂರು ಅಂಶಗಳು ಪ್ರಭಾವಿಸುತ್ತವೆ. ಈ ಮೂರೂ ಅಂಶಗಳು ಒಟ್ಟಾಗಿ ವಿಕಾಸದ ನೆಲೆಯನ್ನು ನಿರ್ಮಿಸುತ್ತವೆ. ಮೊದಲ ಅಂಶವೆಂದರೆ ನಿತ್ಯ ಜೀವನದ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶ. ಇದು ಯಾವ ರೀತಿಯ ಮಕ್ಕಳ ಸಹವಾಸವನ್ನು ಮಗು ಹೊಂದಿರುತ್ತದೆ ಎಂಬಂತಹ ಸಾಮಾಜಿಕ ಜೀವನದ ಮೂಲ ಘಟನೆಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಕೀನ್ಯಾದ ಗ್ರಾಮೀಣ ಭಾಗದಲ್ಲಿ ಕುಟುಂಬಗಳು ದೊಡ್ಡವಾಗಿರುತ್ತವೆ, ತಾಯಂದಿರು ಸಾಮಾನ್ಯವಾಗಿ ಎಂಟು ಅಥವಾ ಅದಕ್ಕಿಂತಲೂ ಹೆಚ್ಚಿನ ಮಕ್ಕಳನ್ನು ಹೊಂದಿರುತ್ತಾರೆ ಮತ್ತು ಈ ಮಕ್ಕಳು ಮನೆಯಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಚಿಕ್ಕ ಮಕ್ಕಳು ತಮ್ಮ ಒಟಹುಟ್ಟಿದವರೊಡನೆ ಆಟವಾಡಲು ಮತ್ತು ಅವರ ಆರೈಕೆಗೆ ಒಳಗಾಗಲು ಸಾಕಷ್ಟು ಅವಕಾಶಗಳಿರುತ್ತವೆ. ಜೀವನ ನಡೆಸುತ್ತಿರುವ ಜಾಗದ ವಿಶಾಲತೆ ಮತ್ತು ಸ್ವರೂಪವೂ ಸಹ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶದ ಪ್ರಮುಖ ವೈಶಿಷ್ಟ್ಯಗಳಾಗಿರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಹಾಲೆಂಡ್‌ನ ದಕ್ಷಿಣ ಭಾಗದಲ್ಲಿ ಚಿಕ್ಕ ಭೌಗೋಳಿಕ ಪ್ರದೇಶದಲ್ಲಿ ಅನೇಕ ಜನ ವಾಸಿಸುತ್ತಾರೆ, ಮನೆಗಳು ಬಹಳ ಚಿಕ್ಕದಾಗಿದ್ದು, ನಡುಮನೆ ಮಕ್ಕಳ ಆಟದ ಜಾಗವಾಗಿಯೂ ಬಳಕೆಯಾಗುತ್ತಿರುತ್ತದೆ. ಸಾಮಾನ್ಯವಾಗಿ ಮನೆಯಲ್ಲಿ ಮಗು ಅಥವಾಅಸು ಮಕ್ಕಳಿದ್ದರೆ ಒಂದೇ ಕೋಣೆಯಲ್ಲಿ ಪ್ಲೇಪೆನ್ ಅಥವಾ ನೆಲದಮೇಲೆ ತೊಟ್ಟಿಲುಮತ್ತು ಮಗು ಆಟ ಆಡುವ ಮೇಜನ್ನು ಇರಿಸಲಾಗಿರುತ್ತದೆ. ಇದರಲ್ಲಿ ಮಗು ಸ್ವತಂತ್ರವಾಗಿ ಹಿರಿಯರ ಸಾಮಿಪ್ಯದಲ್ಲಿಯೇ ಆಟವಾಡುವುದರಿಂದ ಮನೆಯ ಸದಸ್ಯರು ಮಗುವನ್ನು ಗಮನಿಸಲು ಸಾಧ್ಯವಾಗುತ್ತದೆ. ನಿದ್ರೆ ಮಾಡುವುದು ಮತ್ತು ಊಟ ಮಾಡುವಂತಹ ದೈನಂದಿನ ಸಾಮಾನ್ಯ ಚಟುವಟಿಕೆಗಳೂ ಜೀವನದ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶದೊಂದಿಗೆ ಆಯೋಜಿಲ್ಪಟ್ಟಿರುತ್ತವೆ. ಕೀನ್ಯಾದಲ್ಲಿ ಶಿಶುಗಳು ತಮ್ಮ ತಾಯಿಯರೊಂದಿಗೆ ಮಲಗುವವು ಮತ್ತು ಮಧ್ಯರಾತ್ರಿಯಲ್ಲಿ ಎದ್ದಾಗ ತಾಯಿಯು ಅಗತ್ಯ ಆರೈಕೆ ಮಾಡುವಳು.ಅಮೇರಿಕಾಕ್ಕೆ ಹೋಲಿಸಿದಾಗ ಡಚ್ ಮಕ್ಕಳನ್ನು ಬೇಗ ಮಲಗಿಸಲಾಗುತ್ತದೆ. ಮತ್ತು ಎದ್ದೇಳುವ ಸಮಯ ಆಗುವವರೆಗೂ ಅಲ್ಲಿಯೇ ಇರುವಂತೆ ತರಬೇತಿ ನೀಡಲಾಗಿರುತ್ತದೆ. ಇದಕ್ಕೆ ವ್ಯಕ್ತಿರಿಕ್ತವಾಗಿ ಇಟಲಿ ಮತ್ತು ಸ್ಪೇನ್‌ಗಳಲ್ಲಿ ಮಕ್ಕಳನ್ನು ಕುಟುಂಬ ಮತ್ತು ಸಮುದಾಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಡರಾತ್ರಿಯವರೆಗೂ ಎಚ್ಚರದಿಂದಿರಿಸಲಾಗುತ್ತದೆ.


ಮಕ್ಕಳ ಪರಿಸರದ ಅನೇಕ ಅಂಶಗಳು ಸಾಂಪ್ರದಾಯಿಕ ಆಚರಣೆಗಳೊಂದಿಗೆ ಸಂಯೋಜನೆಗೊಂಡಿವೆ ಎಂಬುದನ್ನು ಅರ್ಥೈಸಿಕೊಳ್ಳದೆ

ವಿವಿಧ ಸಂಸ್ಕೃತಿಗಳಲ್ಲಿ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶಗಳ ಅಧ್ಯಯನ ಮಾಡುವುದರಲ್ಲಿ ಆಳವಾಗಿ ತೊಡಗಿಕೊಳ್ಳಲು ಸಾಧ್ಯವಾಗುವುದಿಲ್ಲ; ಇದೇ ಕಾರಣದಿಂದ ಮಕ್ಕಳ ಆರೈಕೆ ಮತ್ತು ಮಕ್ಕಳ ಪಾಲನೆಯ ಸಂಪ್ರದಾಯವನ್ನು ವಿಕಾಸದನೆಲೆಯ ಎರಡನೆ ಅಂಶವಾಗಿ ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ ಗ್ರಾಮೀಣ ಕೀನ್ಯಾದಲ್ಲಿ ದೊಡ್ಡ ಮಕ್ಕಳು ಚಿಕ್ಕ ಮಕ್ಕಳನ್ನು ಆರೈಕೆ ಮಾಡುವುದು ಒಂದು ಸಂಪ್ರದಾಯ. ಕೀನ್ಯಾದ ಸ್ಥಳೀಯ ಭಾಷೆಯಲ್ಲಿ ಈ ರೀತಿ ಮಕ್ಕಳನ್ನು ನೋಡಿಕೊಳ್ಳುವ ಹಿರಿಯ ಮಕ್ಕಳಿಗೆ ವಿಶಿಷ್ಟವಾದ ಹೆಸರಿದೆ. ತಾಯಂದಿರಿಗಿಂತ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ತಮ್ಮ ಒಡಹುಟ್ಟಿದ ಚಿಕ್ಕವರನ್ನು ನೋಡಿಕೊಳ್ಳಬೇಕೆಂದು ನೀರೀಕ್ಷಿಸಲಾಗುತ್ತದೆ. ಇದೇ ರೀತಿ ಹಾಲೆಂಡ್‌ನಲ್ಲಿ ಪ್ಲೇಪೆನ್ / ನೆಲದಲ್ಲಿನ ತೊಟ್ಟಿಲು ಸಹ ಒಂದು ಸಂಪ್ರದಾಯವಾಗಿದ್ದು ಇದು ಡಚ್ ಜೀವನ ಶೈಲಿಯ ಪರಿಸರದಲ್ಲಿ ಹೇಗೆ ಶಿಶು ಮತ್ತು ಎಳೆಯ ಮಕ್ಕಳನ್ನು ಸುರಕ್ಷಿತವಾಗಿ ಮತ್ತು ಸಂತಸವಾಗಿ ಇಟ್ಟುಕೊಳ್ಳಬಹುದು ಎಂಬುದಕ್ಕೆ ಸಾಮಾನ್ಯವಾಗಿ ಸಮ್ಮತಿಯನ್ನು ಹೊಂದಿರುವ ಪರಿಹಾರವಾಗಿದೆ. ಶಿಶುಗಳು ಮಲಗುವ ಸಮಯ ಹಾಗೂ ಮಲಗುವ ವ್ಯವಸ್ಥೆಗಳೆರಡೂ ಸಹ ವಿವಿಧ ಸಂಸ್ಕೃತಿಗಳಲ್ಲಿ ವಿಭಿನ್ನ ಸಾಂಸ್ಕೃತಿಕ ಸಂದರ್ಭಗಳಲ್ಲಿ ವಿಶಿಷ್ಟವಾಗಿರುತ್ತವೆ. ಈ ಎಲ್ಲ ಅಂಶಗಳು, ಸಂಪ್ರದಾಯಗಳು ಹೇಗೆ ಕುಟುಂಬಗಳಿಗೆ ಮತ್ತು ಸಮುದಾಯಗಳಿಗೆ ನಿಯಮವಾಗುತ್ತವೆ ಎಂಬುದನ್ನು ತೋರಿಸುತ್ತವೆ. ಸಾಮಾನ್ಯವಾಗಿ ಮಕ್ಕಳ ಆರೈಕೆಯನ್ನು ಕುರಿತ ಸಂಪ್ರದಾಯಗಳು ಆರೈಕೆಯ ಸಮಸ್ಯೆಗಳಿಗೆ ಸಮಂಜಸವಾದ ಪರಿಹಾರಗಳು ಮತ್ತು ಸ್ವಾಭಾವಿಕ ವರ್ತನೆಗಳು ಎಂದು ಆಯಾ ಸಂಸ್ಕೃತಿಯಲ್ಲಿನ ಪೋಷಕರು ಭಾವಿಸುತ್ತಾರೆ.

ಸಂಪ್ರದಾಯಗಳು ಪೋಷಕರಿಗೆ ಮತ್ತು ಆರೈಕೆ ಮಾಡುವ ಇತರರಿಗೆ ಬೆಂಬಲದ ಮೂಲವಾಗುತ್ತವೆ. ಏಕೆಂದರೆ ಮಕ್ಕಳನ್ನು ಪರಿಸರದಲ್ಲಿರುವ ಅಪಾಯದಿಂದ ಹೇಗೆ ಕಾಪಾಡಬೇಕೆಂಬುದರಿಂದ ಹಿಡಿದು ಸಮಾಜದಲ್ಲಿ ತಮ್ಮ ಭವಿಷ್ಯದ ಪಾತ್ರಗಳಿಗೆ ಸಮರ್ಪಕವಾಗಿ ಶಿಕ್ಷಿತರಾಗುವವರೆಗೆ, ಅಸ್ತಿತ್ವವನ್ನು ಸಾಬೀತುಪಡಿಸುವವರೆಗೆ ಬೆಳವಣಿಗೆ ಹೊಂದುತ್ತಿರುವ ಮಕ್ಕಳಿಗೆ ಅಸ್ತಿತ್ವದಲ್ಲಿರುವ ಅಸಂಖ್ಯಾತ ಸಮಸ್ಯೆಗಳಿಗೆ ಸಿದ್ಧಪರಿಹಾರವನ್ನು ನೀಡುತ್ತವೆ. ಆದರೆಕೆಲವು ಸಂದರ್ಭಗಳಲ್ಲಿ ಸಂಪ್ರದಾಯಗಳನ್ನು ನಿರ್ದಿಷ್ಟವಾಗಿ ಅರ್ಥೈಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವು ಸಾಂಕೇತಿಕವಾಗಿರುತ್ತವೆ.ಉತ್ತರ ಅಮೇರಿಕಾದ ಯಹೂದಿಗಳು ಮತ್ತು ಬಹುತೇಕ ಕ್ರಿಶ್ಚಿಯನ್ನರು ತಮ್ಮ ಗಂಡು ಶಿಶುವನ್ನು ಸುನ್ನತಿಗೊಳಿಸುವುದು ಏಕೆ? ಜಪಾನೀಯರು ಚಿತ್ರರೂಪದ ಜಪಾನೀಸ್ ವರ್ಣಮಾಲೆಯನ್ನು ಕಲಿಯುವಾಗ ಮಕ್ಕಳಿಗೆ ಸರಿಯಾದ ಬ್ರಷ್ ಸ್ಟ್ರೋಕ್‌ನ್ನು ಹೇಳಿಕೊಡುವುದೇಕೆ? ಅಮೇರಿಕನ್ ಮೂಲನಿವಾಸಿಗಳಲ್ಲಿ ಹದಿಹರೆಯದವರು ಏಕಾಂಗಿ ಆತ್ಮಾನ್ವೇಷಣೆಯನ್ನು ಕೈಗೊಳ್ಳುವುದೇಕೆ? ಶಿಶು ಆರೈಕೆ ಮತ್ತು ಶಿಶು ಪಾಲನೆಯ ಈ ಸಂಪ್ರದಾಯಗಳನ್ನು ಅರ್ಥೈಸಿಕೊಳ್ಳಲು ವ್ಯಕ್ತಿಯ ಆಧ್ಯಾತ್ಮ ಮತ್ತು

ಪರಿಕಲ್ಪನೆಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಸಂಪ್ರದಾಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಸ್ಕೃತಿಯ ಅಮೂರ್ತ ಆಯಾಮಗಳನ್ನು ವಿವರಿಸಲು ಕಷ್ಟವಾದರೂ ಸಹ ಅವುಗಳನ್ನು ಪ್ರತಿನಿಧಿಸುವ ಸಂಪ್ರದಾಯಗಳನ್ನು ಕುಟುಂಬಗಳ ಮತ್ತು ಮಕ್ಕಳ ಜೀವನವನ್ನು ವ್ಯವಸ್ಥಿತಗೊಳಿಸುವ ಸಾಂಸ್ಕೃತಿಕ ವಿಧಾನಗಳ ಆಲೋಚನೆಯ ಮೇಲೆ ಒಳನೋಟವನ್ನು ಒದಗಿಸಬಹುದು.

ಪೋಷಕರು ಮತ್ತು ಆರೈಕೆ ಮಾಡುವವರಿಂದ ಹಿಡಿದಿಡಲ್ಪಟ್ಟಿರುವ ಚಿಂತನೆ ಮತ್ತು ಭಾವನೆಗಳ ಈ ಸಾಂಸ್ಕೃತಿಕ ವಿಧಾನಗಳನ್ನು ಮೂರನೆ ಅಂಶವಾಗಿ ಗುರುತಿಸಿದ್ದೇವೆ. ಏಕೆಂದರೆ ಅಭಿವೃದ್ಧಿಯ ಸಾಂಸ್ಕೃತಿಕ ನಂಬಿಕೆ ವ್ಯವಸ್ಥೆ ಮತ್ತು ಮಗುವಿನ ಪಾಲನೆಯ ಸಂಸ್ಕೃತಿಯಡಿಯಲ್ಲಿನ ಭಾವನೆಗಳಿಗೆ ಸಂಬಂಧಿಸಿದ ಹಾಗೂ ಮಗುವಿನ ಜೀವನದ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶಗಳ ಸಂಯೋಜನೆಯನ್ನು ಮೌಲ್ಯೀಕರಿಸುವುದಕ್ಕಾಗಿ ವಿಕಾಸದ ನೆಲೆಯ ಮೂರನೇ ಅಂಶವಾಗಿ ಪರಿಗಣಿಸುವುದು ಮುಖ್ಯವಾಗುತ್ತದೆ. ಉದಾಹರಣೆಗೆ ಮಗು ಮತ್ತು ಎಳೆಯ ಮಕ್ಕಳನ್ನು ಪೋಷಕರ ಸಮೀಪದಲ್ಲಿಯೇ ಮಲಗಿಸಿಕೊಳ್ಳುವಂತಹ ಸಂಸ್ಕೃತಿಯಲ್ಲಿ ಸಾಮಾನ್ಯವಾಗಿ ಪೋಷಕರು ತಮ್ಮ ಮಕ್ಕಳನ್ನು ತಮ್ಮ ಸಮೀಪವಲ್ಲದೆ ಬೇರೆ ಮಲಗಿಸುವುದು ಮಗುವು ರಾತ್ರಿಯಲ್ಲಿ ಎಚ್ಚರಗೊಂಡಾಗ, ಅಳುವಾಗ ಮಗುವಿನ ಅಗತ್ಯಗಳಿಗೆ ಹಾಜರಾಗಲು ತೊಡಕಾಗುತ್ತದೆ ಮತ್ತು ಮಗುವನ್ನು ನಿರ್ಲಕ್ಷಿಸಿದಂತೆ ಎಂದು ಭಾವಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ತನ್ನದೇ ಆದ ಪ್ರತ್ಯೇಕ ಕೋಣೆಯಲ್ಲಿ ಮಗುವನ್ನು ತನ್ನಷ್ಟಕ್ಕೆ ಮಲಗಿಸುವಂತಹ ಆಚರಣೆಯನ್ನು ಪಾಲಿಸುವಂತಹ ಅಮೇರಿಕಾದ ಮಧ್ಯಮ ವರ್ಗದ ಕುಟುಂಬಗಳಲ್ಲಿ ಮಕ್ಕಳನ್ನು ರಾತ್ರಿಯೆಲ್ಲಾ ಮಲಗಲು ಮತ್ತು ಮಧ್ಯದಲ್ಲಿ ಎದ್ದರೆ ಅಳದೆ ಸುಮ್ಮನಿರುವಂತೆ ಮಾಡುವುದು ಮಗುವನ್ನು ಸ್ವತಂತ್ರವಾಗಿರಲು ತರಬೇತಿ ನೀಡುವ ದೊಡ್ಡ ಕಾರ್ಯಸೂಚಿಯ ಭಾಗವೆಂದು ಮತ್ತು ಜೀವನದುದ್ದಕ್ಕೂ ಸಾಂಸ್ಕೃತಿಕವಾಗಿ ಪ್ರಮುಖ ಗುಣಲಕ್ಷಣ ಎಂದು ಅರ್ಥೈಸಿಕೊಳ್ಳಲಾಗುತ್ತದೆ. ಈ ನಿದರ್ಶನಗಳಲ್ಲಿ ನಾವು ಎರಡೂ ರೀತಿಯ ಸನ್ನಿವೇಶಗಳಲ್ಲಿ ಮಕ್ಕಳನ್ನು ಮಲಗಿಸುವ ವ್ಯವಸ್ಥೆಯು ಪೋಷಕರ ನಂಬಿಕೆಗಳು ಸಮಾಜದಲ್ಲಿನ ವ್ಯಕ್ತಿಯ ಬಗ್ಗೆ ಬಹುತೇಕ ಸಾಮಾನ್ಯ ವಿಚಾರಗಳನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಆರೈಕೆ ಮಾಡುವವರ ಮನೋಸ್ಥಿತಿ ನಿರ್ದಿಷ್ಟ ಸಂದರ್ಭ ಆಧಾರಿತ ಆಚರಣೆ ಮತ್ತು ಸನ್ನಿವೇಶಗಳ ಮೂಲಕ ಮಕ್ಕಳ ಬಗ್ಗೆ ಸಾಮಾನ್ಯ ಸಾಂಸ್ಕೃತಿಕ ನಂಬಿಕೆ ವ್ಯವಸ್ಥೆಯನ್ನು ಹಂಚಿಕೊಳ್ಳಲು ಪ್ರಮುಖ ಮಾಧ್ಯಮವಾಗಿದೆ.




ಚಿತ್ರ– 1 ವಿಕಾಸದ ನೆಲೆಯು ಈ ಮೂರು ಅಂಶಗಳನ್ನು ಮತ್ತು ಅವುಗಳ ನಡುವಿನ ಪರಸ್ಪರ ಸಂಬಂಧವನ್ನು ಅಂದರೆ, ಮಗು ಮತ್ತು ವ್ಯಾಪಕ ವಾತಾವರಣ ಇದರ ಕುರಿತು ವಿವರಿಸುತ್ತದೆ. ಮೊದಲಿಗೆ ಸನ್ನಿವೇಶ ಅನಂತರ ಆಚರಣೆ ಮತ್ತು ಆರೈಕೆ ಮಾಡುವವರ ಮನಸ್ಥಿತಿಇವು ಮೇಲೆ ವಿವರಿಸಲಾಗಿರುವಂತೆ ಮಗುವಿನ ಸೂಕ್ಷ್ಮ ಪರಿಸರವನ್ನು ನಿರ್ಮಿಸುತ್ತವೆ; ಆದ್ದರಿಂದ ಇವು ವಿಕಾಸದ ನೆಲೆಗಳಾಗಿವೆ.

ಮೂರು ಎರಡು ತುದಿಗಳಿರುವ ಬಾಣಗಳು ಪ್ರತಿ ಅಂಶಗಳು ಪರಸ್ಪರ ಹೇಗೆ ನೆಲೆಯೊಳಗೆ ಪ್ರಭಾವ ಬೀರುತ್ತವೆ ಎಂಬುದರ ಪ್ರಮುಖ ಸಂಬಂಧವನ್ನು ಪ್ರಸ್ತುತ ಪಡಿಸುತ್ತವೆ. ಮಾನಸಿಕ ಮತ್ತು ಪ್ರಾಯೋಗಿಕ ಬಗೆ ಬಗೆಯ ಕಾರಕಾಂಶಗಳು ಮೂರು ಅಂಶಗಳ ನಡುವೆ ಸಾಮರಸ್ಯವನ್ನು ಪ್ರೇರೇಪಿಸುತ್ತವೆ. ಪೋಷಕರು ಅಪಾಯಕಾರಿ ಎಂದು ನಿರ್ಣಯಿಸುವ ಸನ್ನಿವೇಶದಲ್ಲಿ ತಮ್ಮ ಮಕ್ಕಳನ್ನು ಸುಲಭವಾಗಿ ಬಿಡುವುದಿಲ್ಲ. ಸಾಮಾನ್ಯವಾಗಿ ಮಗುವಿನ ಆರೈಕೆಯ ಆಚರಣೆಯನ್ನು ನಿರ್ದಿಷ್ಟ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಮತ್ತು ಆರೈಕೆ ಮಾಡುವವರಿಗೆ ಯಾವುದು ಸಾಂಕೇತಿಕವಾಗಿ ಸ್ವೀಕಾರವಾಗಿದೆ ಎಂಬುದರ ಆಧಾರದ ಮೇಲೆ ಸ್ವೀಕೃತಿ ಮಾಡಿಕೊಳ್ಳಲಾಗುವುದು. ಸಾಮರಸ್ಯದ ಸ್ಥಿರ ಸ್ಥಿತಿಯನ್ನು ವಿರಳವಾಗಿ ಸಾಧಿಸಲಾಗುವುದು, ಆದರೆ ಚಿತ್ರದಲ್ಲಿನ ಅನಿಯಮಿತ ಗೆರೆಗಳು ಅಂಶಗಳನ್ನು ಪ್ರತ್ಯೇಕಿಸುವುದು ಸಂಪರ್ಕದ ಬಿಂದು ಸ್ವಲ್ಪಮಟ್ಟಿಗೆ ನಮ್ಯವಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ಅರ್ಥದಲ್ಲಿ ನೆಲೆಯು ಒಂದು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಅರೆಸ್ವತಂತ್ರ ಭಾಗಗಳು ನಿರಂತರವಾಗಿ ಪ್ರಭಾವ ಬೀರುತ್ತಿರುತ್ತವೆ ಮತ್ತು ಪರಸ್ಪರ ಹೊಂದಿಕೊಳ್ಳುತ್ತಿರುತ್ತವೆ.

ಗಾತ್ರದಲ್ಲಿ ದೊಡ್ಡದಾಗಿರುವ ಮತ್ತು ಒಂದು ತುದಿಯನ್ನು ಹೊಂದಿರುವ ಭಾಗಗಳು ನೆಲೆಯ ಎರಡನೆ ಅಂಶವನ್ನು ವಿವರಿಸುತ್ತವೆ. ಸಂಕೀರ್ಣವಾದ ಮಾನವಕುಲಕ್ಕೆ ಸಂಬಂಧಿಸಿದ ಪರಿಸರವುನೆಲೆಯ ಮೂರು ಅಂಶಗಳನ್ನು ವಿಭಿನ್ನವಾಗಿ ಪ್ರಭಾವಿಸುತ್ತದೆಎಂಬುದನ್ನು ವಿವರಿಸುತ್ತವೆ. ಆಚರಣೆಗಳು ತಮ್ಮದೇ ಆದ ನಿರ್ದಿಷ್ಟ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿವೆ ಹಾಗೂ

ಸಾಂಪ್ರದಾಯಿಕ ಬಲದ ಪ್ರಭಾವವನ್ನು ಹೊಂದಿದ್ದು, ಬಹುತೇಕ ಪೋಷಕರು "ಆಲೋಚನೆಯನ್ನೇ ಮಾಡದೆ" ತಾವು ಬೆಳೆದಂತಹ ಅವೇ ಅನೇಕ ಸಂಪ್ರದಾಯಗಳನ್ನು ತಮ್ಮದಾಗಿಸಿಕೊಂಡು ತಮ್ಮ ಮಕ್ಕಳ ಪಾಲನೆಯನ್ನು ಮಾಡುತ್ತಾರೆ. ಆರ್ಥಿಕ ಮತ್ತು ಜನಸಂಖ್ಯಾತ್ಮಕವಾದ ಬದಲಾವಣೆಗಳು ಮಕ್ಕಳ ದೈನಂದಿನ ಜೀವನದ ಸನ್ನಿವೇಶದ ಮೇಲೆ ತೀವ್ರ ಪ್ರಭಾವಗಳನ್ನು ಬೀರುತ್ತವೆ. ಅವರು ಬಾಲವಾಡಿಕೇಂದ್ರದಲ್ಲಿ ಅಥವಾ ನಗರ ಪ್ರದೇಶಗಳಲ್ಲಿ ಕೆಲವೇ ಸಹೋದರ ಸಹೋದರಿಯರೊಂದಿಗೆ ತಮ್ಮ ದಿನವನ್ನು ಕಳೆಯಬಹುದು. ಆರೈಕೆ ಮಾಡುವವರ ಮನಸ್ಥಿತಿಯು ರಾಷ್ಟ್ರೀಯ ಅಥವಾ ಸಮುದಾಯ ಹಂತದಲ್ಲಿ ಮಕ್ಕಳ ಸ್ವಭಾವ ಹಾಗೂ ಅವರ ಅಗತ್ಯಗಳು ಹಾಗೂ ಭವಿಷ್ಯದಲ್ಲಿ ಅವರಿಗೆ ಅಗತ್ಯವಿರುವ ಕೌಶಲಗಳ ಆಲೋಚನೆಗಳನ್ನು ನೇರವಾಗಿ ಪ್ರಭಾವಿಸಬಹುದು. ಸಂಕ್ಷಿಪ್ತವಾಗಿಹೇಳುವುದಾದರೆ, ಬೃಹತ್ ಸಮಾಜದಲ್ಲಿ ಬದಲಾಗಲು ಅನೇಕ ಮಾರ್ಗಗಳಿವೆ ಅಥವಾ ಭೌತಿಕ ಪರಿಸರ ಮಗುವನ್ನು ಪ್ರಭಾವಿಸಬಹುದು, ಆದರೆ ಎಲ್ಲವೂ ನೆಲೆಯ, ಅವೇ ಅಂಶಗಳ ಮುಖಾಂತರ ಕಾರ್ಯನಿರ್ವಹಿಸುವುದಿಲ್ಲ.

ಅಂತಿಮವಾಗಿ ವಿಕಾಸದ ನೆಲೆಯು ರೂಪುಗೊಳ್ಳುವಿಕೆಯು ಮಗು ಮತ್ತು ಪರಿಸರವನ್ನು ಪರಸ್ಪರ ಹೊಂದಿಸುತ್ತದೆ ಎಂಬ ವಾಸ್ತವತೆಯನ್ನು ಗುರುತಿಸುತ್ತದೆ. ಚಿತ್ರ 1ರಲ್ಲಿ ವಕ್ರ ರೇಖೆಗಳು ಪರಸ್ಪರ ಹೊಂದಿಕೊಂಡಿವೆ. ಮಗುವಿನ ವಿಕಾಸದ ಕೆಲವು ದೃಷ್ಟಿಕೋನಗಳು ಮಗುವಿನ ವರ್ತನೆಯು ಪರಿಸರದ ಮುಖಾಂತರ ರೂಪುಗೊಳ್ಳುತ್ತದೆ ಎಂಬುದನ್ನು ಒತ್ತಿ ಹೇಳುತ್ತವೆ, ಅಂದರೆ ಮಕ್ಕಳು ತಮ್ಮ ಕುಟುಂಬದ ಅಗತ್ಯತೆ ಮತ್ತು ಅವರ ಸಂಸ್ಕೃತಿಯಲ್ಲಿ ಹೊಂದಿಕೊಳ್ಳಬೇಕಿರುವುದನ್ನು ನಿರ್ಧರಿಸುತ್ತದೆ. ಆದರೆ ಇತ್ತೀಚಿನ ಸಂಶೋಧನೆಗಳು ತೋರಿಸಿಕೊಟ್ಟಿರುವಂತೆ ಪೋಷಕರು ಮತ್ತು ಆರೈಕೆ ಮಾಡುವವರುವೈಯಕ್ತಿಕ ಮಗುವಿನ ನಿರ್ದಿಷ್ಟ ಮನೋಧರ್ಮ ಮತ್ತು ಪ್ರತಿಭೆಯ ಪ್ರತಿಕ್ರಿಯೆಯಾಗಿ ತಮ್ಮ ಬೇಡಿಕೆಗಳನ್ನು ಮತ್ತು ತಮ್ಮ ಬೆಂಬಲವನ್ನು ಮಾರ್ಪಡಿಸಿಕೊಳ್ಳುತ್ತಾರೆ. ಇದರೊಂದಿಗೆ ಮಗುವು ಅದರಲ್ಲೂ ಆರಂಭಿಕ ವರ್ಷಗಳಲ್ಲಿ ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವ ವ್ಯಕ್ತಿ. ಹಾಗಾಗಿ ಭಾಷೆ ಮತ್ತು ಸಾಮಾಜಿಕ ಕೌಶಲಗಳು ಅಭಿವೃದ್ಧಿಗೊಳ್ಳುತ್ತವೆ, ವೈಯಕ್ತಿಕ ಆಸಕ್ತಿಗಳು ಹುಟ್ಟಿಕೊಳ್ಳುತ್ತವೆ, ಮಗುವು ಪರಿಸ್ಥಿತಿಯನ್ನು ನಿಭಾಯಿಸುವುದನ್ನು ಕಲಿತುಕೊಳ್ಳುತ್ತದೆ, ಈ ರೀತಿಯಾಗಿ ಮಗುವು ತಾನು ಬದಲಾಗುತ್ತಿರುವುದರ ಜೊತೆಗೆ ಬಾಹ್ಯ ಪ್ರಭಾವಗಳಿಗೆ ಪ್ರತಿಕ್ರಿಯೆಯಾಗಿಯೂ ವಿಕಾಸ ಹೊಂದುತ್ತದೆ. ಸಹಜವಾಗಿಯೇ ಹಲವು ವೈಶಿಷ್ಟ್ಯಗಳು ಸ್ಥಿರವಾಗಿರುತ್ತವೆ ಅಥವಾ ಮಗುವಿನ ಬದಲಾವಣೆಯ ಜೊತೆ ಜೊತೆಯೇ ಕನಿಷ್ಠ ಸವಾಲುಗಳು ಎದುರಾಗುತ್ತವೆ. ವೈಯಕ್ತಿಕ ಆಸಕ್ತಿಗಳು ಹುಟ್ಟಿಕೊಳ್ಳುತ್ತವೆ ಹಾಗೂ ಮಗು ಪರಿಸ್ಥಿಗಳನ್ನು ನಿಭಾಯಿಸುವುದನ್ನು ಕಲಿಯುವುದು, ಇವು ಬದಲಾಗುತ್ತಿರುವ ಮಗುವಿನ ಹಾಗೂ ಬಾಹ್ಯ ಪ್ರಭಾವಗಳ ಪ್ರತಿಕ್ರಿಯೆಗೆ ಅನುಗುಣವಾಗಿ ಅಭಿವೃದ್ಧಿಗೊಳ್ಳುತ್ತಾ ಹೋಗುತ್ತವೆ. ಸಹಜವಾಗಿ ಅನೇಕ ವೈಶಿಷ್ಟ್ಯಯಗಳು

ಸ್ಥಿರವಾಗಿರುತ್ತವೆ ಅಥವಾ ಕನಿಷ್ಕಪಕ್ಷ ಮಗುವಿನಲ್ಲಿ ಆಗುವ ಬದಲಾವಣೆಯ ಬೆಳವಣಿಗೆಗೆ ಸಮಾನಾಂತರವಾಗಿ ಸವಾಲುಗಳು ಪ್ರಸ್ತುತಗೊಳ್ಳುತ್ತಾ ಹೋಗುತ್ತವೆ. ಮೌಲ್ಯಗಳು, ಪ್ರೇರಣೆಗಳು, ಭಯ ಇವುಗಳೊಡನೆ ಹೆಣೆದುಕೊಂಡಿರುತ್ತವೆ, ಈ ಆಶಯ/ವಿಷಯವಸ್ತುಗಳು ಪಕ್ವತೆ ಹೊಂದುತ್ತಾ ವಯಸ್ಕರಾದಂತೆಲ್ಲಾ ನಿರ್ದಿಷ್ಟ ಬಲವನ್ನು ಪಡೆದುಕೊಳ್ಳುತ್ತಾ ಹೋಗುತ್ತವೆ.

ಈ ಅಧ್ಯಾಯದ ಆರಂಭದಲ್ಲಿ, ಬಾಲ್ಯದ ಸಾಂಸ್ಕೃತಿಕ ಅನುಭವಗಳು ಜೀವನದುದ್ದಕ್ಕೂ ವ್ಯಕ್ತಿಯ ಆಲೋಚನೆಗಳು, ಭಾವನೆಗಳು ಮತ್ತು ನಡವಳಿಕೆಗಳನ್ನು ರೂಪಿಸುವಲ್ಲಿ ಹೇಗೆ ಪ್ರಮುಖ ಮತ್ತು ಶಾಶ್ವತವಾದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ನಾವು ತಿಳಿದಿದ್ದೇವೆ. ವಿಕಾಸದ ನೆಲೆಯ ಸಾಂಸ್ಕೃತಿಕ ಚೌಕಟ್ಟುಮಗುವಿನ ಪರಿಸರ ಮತ್ತು ಅವುಗಳ ಪರಸ್ಪರ ಸಂಬಂಧ, ವಿಶಾಲ ವಾತಾವರಣ ಮತ್ತು ಮಗುವಿನ ಕುರಿತ ವ್ಯವಸ್ಥಿತ ವಿಶ್ಲೇಷಣೆಯ ಮುಖಾಂತರ ಇಂತಹ ಒಂದು ಅರ್ಥೈಸುವಿಕೆಯನ್ನು ಪಡೆಯಲು ಸಹಾಯವಾಗುತ್ತದೆ. ಈ ವಿಶ್ಲೇಷಣೆಯಲ್ಲಿ, ಇದು ಮಗುವಿನ ಸಾಂಸ್ಕೃತಿಕ ಪರಿಸರವು ರೂಪಣಾತ್ಮಕ ವರ್ಷಗಳಲ್ಲಾಗುವ ಅನುಭವಗಳಾದ ಕಾರಣಕ್ಕೆ ಮಾತ್ರವೇ ಅದು ಶಕ್ತಿಶಾಲಿ ಯಾಗಿರುವುದಿಲ್ಲ. ಆದರೆ ಒಂದೇ ರೀತಿಯ ಸಾಂಸ್ಕೃತಿಕ ಸಂದೇಶವನ್ನು ವೈವಿಧ್ಯಮಯ ವಿಧಾನಗಳ ಮೂಲಕ ತಿಳಿಯಪಡಿಸಲಾಗುವ ಸಂವಾದಾತ್ಮಕ ವ್ಯವಸ್ಥೆಯನ್ನು ಒಳಗೊಂಡಿರುವುದರಿಂದಲೂ ಅವು ಶಕ್ತಿಶಾಲಿಯಾಗಿರುತ್ತವೆ. ಪದಗಳ ಆಯ್ಕೆ, ವ್ಯಾಕರಣ ರಚನೆ ಮತ್ತು ಧ್ವನಿಯ ಏರಿಳಿತಗಳ ಮುಖಾಂತರ ಒಂದೇ ಕಲ್ಪನೆ/ ಐಡಿಯಾವನ್ನು ಸಂವಹನ ಮಾಡುವಂತಹ ಭಾಷೆಯ ರೀತಿಯಲ್ಲಿಯೇ, ಸಾಂಸ್ಕೃತಿಕ ಪರಿಸರದಲ್ಲಿಯೂ ಸಹ ಮಗುವು ದೈನಂದಿನ ಜೀವನದ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶದ ಪ್ರಭಾವದಿಂದ ಒಂದೇ ರೀತಿಯಲ್ಲಿ ಅಲೋಚನೆ ಮಾಡುವುದು, ವರ್ತಿಸುವುದು ಮತ್ತು ವಿವಿಧ ರೀತಿಯಲ್ಲಿ ತಿಳಿಯಪಡಿಸಲಾದ ಪೋಷಕರ ಆಲೋಚನೆಗಳನ್ನು ಅಭಿವ್ಯಕ್ತಿಸುವುದನ್ನು ಕಲಿತುಕೊಳ್ಳಬಹುದು. ವಿಕಾಸದ ಅವಧಿಯಲ್ಲಿ ಈ ಸಂದೇಶಗಳು ಎಷ್ಟರಮಟ್ಟಿಗೆ ಆಂತರಿಕವಾಗಿ ಮಾರ್ಪಾಟಾಗುತ್ತವೆ ಅಂದರೆ ಅವರು ಸ್ವತಃ ಮತ್ತು ಪ್ರಪಂಚದ ಬಗ್ಗೆ ಅರ್ಥಕಟ್ಟಿಕೊಳ್ಳಲು ಮೂಲ ಕೇಂದ್ರವಾಗಿ ರೂಪುಗೊಳ್ಳುತ್ತವೆ. ಈ ರೀತಿಯಾಗಿ ಸ್ವಧರ್ಮ ಮತ್ತು ಆತ್ಮ ಸಂಸ್ಕೃತಿ ಹಾಗೂ ವೈಯಕ್ತಿಕ ಮನೋಸ್ಥಿತಿಗಳು ಮರುಸೃಷ್ಟಿ ಮತ್ತು ಸ್ವಂತಿಕೆಯೊಳಗೆ ಸಾಂಸ್ಕೃತಿಕ ರೂಪಾಂತರಗೊಳ್ಳುವಿಕೆಯಲ್ಲಿ ಪರಸ್ಪರ ಬೆಸೆದುಕೊಂಡಿವೆ.

***

## *REFERENCES*

Harkness, S., &Super, C. M. (1987). The uses of cross-cultural research in child development. In G. **J.** Whitehurst & R Vasta (eds.),

Annals of child development(vol. 4) (pp. 209-244). Greenwich, Connecticut: **JAI** Press.
Mead, M. (1928). Coming of age in Samoa. New York: Morrow.
Super, C. M., & Harkness, S. (1986). The developmental niche: A conceptualization at the interface of child and culture. International Journal of Behavioral Deuelopmenf, 9,545-569.
Whiting, B. B., & Edwards, C. P. (1988). Children of different worlds: The formation of social behavior. Cambridge, Mass: Harvard University Press.